**<u>ದಿನಾಂಕ 23-12-2021 ರಂದು ಸಾಕ್ಷಿಯನ್ನು ನ್ಯಾಯಾಲಯಕ್ಕೆ ಪುನಃ ಕರಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ ಃ ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ</u>**

11. ದಿನಾಂಕ 24-04-2014 ರಂದು ಈ ಪ್ರಕರಣದ ಆರೋಪಿತರು ದೊಡ್ಡಬೆಳವಂಗಲ ಠಾಣೆಯ ಮೊಕದ್ದಮೆ ಸಂಖ್ಯೆ.48/2014 ರಲ್ಲಿ ನ್ಯಾಯಾಂಗ ಬಂಧನದಲ್ಲಿ ಇದ್ದು ಸದರಿ ಆರೋಪಿತರು ಈ ಪ್ರಕರಣದಲ್ಲೂ ಸಹ ಆರೂಪಿತರಾಗಿದ್ದು ಮುಂದಿನ ವಿಚಾರಣೆಗಾಗಿ ಆರೋಪಿತರನ್ನು ಬಾಡಿ ವಾರೆಂಟ್ ಮೇಲೆ ನ್ಯಾಯಾಲಯದ ಮುಂದೆ ಆ ದಿನ ಹಾಜರುಪಡಿಸಿದ್ದು ಆ ದಿನ ನಾನು ಮಾನ್ಯ ನ್ಯಾಯಾಲಯಕ್ಕೆ 5 ಜನ ಆರೋಪಿತರು ವಿಚಾರಣೆಗಾಗಿ ಪೋಲಿಸ್ ಕಸ್ಟಡಿಗಾಗಿ ಅರ್ಜಿಯನ್ನು ಸಲ್ಲಿಸಿದ್ದು ಮಾನ್ಯ ನ್ಯಾಯಾಲಯವು 5 ಜನ ಆರೋಪಿತರನ್ನು ದಿನಾಂಕ 24-04-2014 ರಿಂದ 28-04-2014 ರವರೆಗೂ ಪೋಲಿಸ್ ಕಸ್ಟಡಿಗೆ ನೀಡಿರುತ್ತಾರೆ. ಸದರಿ ಆರೋಪಿತರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಠಾಣೆಗೆ ಕರೆತಂದು ದಸ್ತಗಿರಿ ಕ್ರಮ ಅನುಸರಿಸಿ ಆರೋಪಿತರುಗಳ ಸ್ವ-ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

12. 1ನೇ ಆರೋಪಿಯು ತನ್ನ ಸ್ವ-ಇಚ್ಛಾ ಹೇಳಿಕೆಯ 5ನೇ ಪೇಜ್ ಕೊನೆಯ ಪ್ಯಾರಾದಲ್ಲಿ ನನ್ನನ್ನು ಕರೆದಕೊಂಡು ಹೋದರೆ ನಾವು, ಇಬ್ಬರು ಹುಡುಗರಿಗೆ ಹೆದರಿಸಿ ಎ.ಟಿ.ಎಂ.ನಿಂದ ಹಣವನ್ನು ಡ್ರಾ ಮಾಡಿದ ಜಾಗ, ಮತ್ತು ಲಾರಿ ಡ್ರೈವರ್‌ಗೆ ಹೊಡೆದ ಹಾಗೂ ಲಾರಿ ನಿಲ್ಲಿಸಿದ್ದ ಜಾಗ, ಟೈಯರ್ ಬಿಚ್ಚಿದ ಜಾಗವನ್ನು ತೋರಿಸುತ್ತೇನೆಂದು ಹೇಳಿದ ಹೇಳಿಕೆಯ ಭಾಗವನ್ನು ನಿಪಿ-46, ಸಾಕ್ಷಿಯ ಸಹಿಯನ್ನು ನಿಪಿ-46(ಎ) ಆರೋಪಿಯ ಸಹಿಯನ್ನು ನಿಪಿ-46(ಬಿ) ಎಂದು ಗುರುತಿಸಲಾಯಿತು.

13. 2ನೇ ಆರೋಪಿಯು ತನ್ನ ಸ್ವ-ಇಚ್ಛಾ ಹೇಳಿಕೆಯ 5ನೇ ಪೇಜ್ ಕೊನೆಯ ಪ್ಯಾರಾದಲ್ಲಿ ನನ್ನನ್ನು ಕರೆದಕೊಂಡು ಹೋದರೆ -------- ನಿಂದ ವಾಚನ್ನು ಹಾಜರುಪಡಿಸುತ್ತೇನೆ ಎನ್ನುವ

ಸ್ವ-ಖುಷಿ ಹೇಳಿಕೆಯ ಭಾಗವನ್ನು ನಿಪಿ-47 ಎಂದು, ಸಾಕ್ಷಿಯ ಸಹಿಯನ್ನು ನಿಪಿ-47(ಎ) ಆರೋಪಿಯ ಸಹಿಯನ್ನು ನಿಪಿ-47(ಬಿ) ಎಂದು ಗುರುತಿಸಲಾಯಿತು.

14. 3ನೇ ಆರೋಪಿಯು ತನ್ನ ಸ್ವ-ಇಚ್ಛಾ ಹೇಳಿಕೆಯ 5ನೇ ಪೇಜ್ ಕೊನೆಯ ಪ್ಯಾರಾದಲ್ಲಿ ನನ್ನನ್ನು ಕರೆದಕೊಂಡು ಹೋದರೆ ನಾವು, ಇಬ್ಬರು ಹುಡುಗರಿಗೆ ಹೆದರಿಸಿ ಎ.ಟಿ.ಎಂ. ನಿಂದ ಹಣವನ್ನು ಡ್ರಾ ಮಾಡಿದ ಜಾಗ ಮತ್ತು ಲಾರಿ ಡ್ರೈವರ್‌ಗೆ ಹೊಡೆದ ಹಾಗೂ ಲಾರಿ ನಿಲ್ಲಿಸಿದ್ದ ಜಾಗ, ಟೈಯರ್ ಬಿಚ್ಚಿದ ಜಾಗವನ್ನು ಮತ್ತು ಡೀಸೆಲ್ ಮಾರಿರುವ ವ್ಯಕ್ತಿಯನ್ನು ತೋರಿಸಿಕೊಡುತ್ತೇನೆ ಎಂದು ಹೇಳಿದ ಹೇಳಿಕೆಯ ಭಾಗವನ್ನು ನಿಪಿ-48, ಸಾಕ್ಷಿಯ ಸಹಿಯನ್ನು ನಿಪಿ-48(ಎ) ಆರೋಪಿಯ ಸಹಿಯನ್ನು ನಿಪಿ-48(ಬಿ) ಎಂದು ಗುರುತಿಸಲಾಯಿತು.

15. 4ನೇ ಆರೋಪಿಯು ತನ್ನ ಸ್ವ-ಇಚ್ಛಾ ಹೇಳಿಕೆಯ 5ನೇ ಪೇಜ್ ಕೊನೆಯ ಪ್ಯಾರಾದಲ್ಲಿ ನನ್ನನ್ನು ಕರೆದಕೊಂಡು ಹೋದರೆ ನಾವು, ಇಬ್ಬರು ಹುಡುಗರಿಗೆ ಹೆದರಿಸಿ ಎ.ಟಿ.ಎಂ. ನಿಂದ ಹಣವನ್ನು ಡ್ರಾ ಮಾಡಿದ ಜಾಗ, ಮತ್ತು ಲಾರಿ ಡ್ರೈವರ್‌ಗೆ ಹೊಡೆದ ಹಾಗೂ ಲಾರಿ ನಿಲ್ಲಿಸಿದ್ದ ಜಾಗ, ಟೈಯರ್ ಬಿಚ್ಚಿದ ಜಾಗವನ್ನು ಮತ್ತು ಡೀಸೆಲ್ ಮಾರಿರುವ ವ್ಯಕ್ತಿಯನ್ನು ತೋರಿಸಿಕೊಡುತ್ತೇನೆ ಎಂದು ಹೇಳಿದ ಹೇಳಿಕೆಯ ಭಾಗವನ್ನು ನಿಪಿ-49, ಸಾಕ್ಷಿಯ ಸಹಿಯನ್ನು ನಿಪಿ-49(ಎ) ಆರೋಪಿಯ ಸಹಿಯನ್ನು ನಿಪಿ-49(ಬಿ) ಎಂದು ಗುರುತಿಸಲಾಯಿತು.

16. 5ನೇ ಆರೋಪಿಯು ತನ್ನ ಸ್ವ-ಇಚ್ಛಾ ಹೇಳಿಕೆಯ 5ನೇ ಪೇಜ್ ಕೊನೆಯ ಪ್ಯಾರಾದಲ್ಲಿ ನನ್ನನ್ನು ಕರೆದಕೊಂಡು ಹೋದರೆ ನಾವು, ಇಬ್ಬರು ಹುಡುಗರಿಗೆ ಹೆದರಿಸಿ ಎ.ಟಿ.ಎಂ. ನಿಂದ ಹಣವನ್ನು ಡ್ರಾ ಮಾಡಿದ ಜಾಗ, ಮತ್ತು ಲಾರಿ ಡ್ರೈವರ್‌ಗೆ ಹೊಡೆದ ಹಾಗೂ ಲಾರಿ ನಿಲ್ಲಿಸಿದ್ದ ಜಾಗ, ಟೈಯರ್ ಬಿಚ್ಚಿದ ಜಾಗವನ್ನು ಮತ್ತು ಡೀಸೆಲ್ ಮಾರಿರುವ ವ್ಯಕ್ತಿಯನ್ನು ತೋರಿಸಿಕೊಡುತ್ತೇನೆ

ಎಂದು ಹೇಳಿದ ಹೇಳಿಕೆಯ ಭಾಗವನ್ನು ನಿಪಿ-50, ಸಾಕ್ಷಿಯ ಸಹಿಯನ್ನು ನಿಪಿ-50(ಎ) ಆರೋಪಿಯ ಸಹಿಯನ್ನು ನಿಪಿ-50(ಬಿ) ಎಂದು ಗುರುತಿಸಲಾಯಿತು.

17. ದಿನಾಂಕ 25-04-2014 ರಂದು ಈ ಪ್ರಕರಣದ 2ನೇ ಆರೋಪಿ/ಕೃಷ್ಣ ಈತನು ಮೊಕದ್ದಮೆ ಸಂಖ್ಯೆ.35/2014 ರಲ್ಲಿ ಕಿತ್ತುಕೊಂಡಿರುವ ವಾಚನ್ನು ಬನ್ನಹಳ್ಳಿಯ ತನ್ನ ಮನೆಯಲ್ಲಿ ಇಟ್ಟಿರುವುದಾಗಿ ಹೇಳಿದ್ದು ನನ್ನೊಂದಿಗೆ ಬಂದರೆ ಅದನ್ನು ಹಾಜರುಪಡಿಸುವುದಾಗಿ ಹೇಳಿದ ಮೇರೆಗೆ ಠಾಣೆಗೆ ನರಸಿಂಹಮೂರ್ತಿ, ಮಂಜುನಾಥರವರನ್ನು ಬರಮಾಡಿಕೊಂಡು ಪ್ರಕರಣದ ವಿಚಾರವನ್ನು ತಿಳಿಸಿ ಅವರಿಗೆ ಪಂಚರಾಗಲು ನೋಟಿಸ್ ನೀಡಿರುತ್ತೇನೆ. ಸದರಿಯವರು ಒಪ್ಪಿಕೊಂಡಿದ್ದು ಅದರಂತೆ 2ನೇ ಆರೋಪಿಯು ನಮ್ಮನ್ನು ಠಾಣೆಯಿಂದ ಕರೆದುಕೊಂಡು ಅವರ ಊರಾದ ಬನ್ನಹಳ್ಳಿಯ ಮನೆಗೆ ಕರೆದುಕೊಂಡು ಹೋಗಿ ಆತನ ಮನೆಯ ಕಬೋರ್ಡ್‌ನಲ್ಲಿ ಇಟ್ಟಿದ್ದ ಗೋಲ್ಡ್‌ಕೇಸ್ ಟೈಟಾನ್ ವಾಚನ್ನು ನಮ್ಮ ಮತ್ತು ಪಂಚರ ಸಮಕ್ಷಮದಲ್ಲಿ ಹಾಜರುಪಡಿಸಿದ್ದು ಅದನ್ನು ಮುಂದಿನ ಕ್ರಮಕ್ಕಾಗಿ ಅಮಾನತ್ತುಪಡಿಸಿಕೊಂಡು ಪಂಚನಾಮೆಯನ್ನು 12-45 ರಿಂದ 1-30 ಗಂಟೆವರೆಗೂ ಜರುಗಿಸಿರುತ್ತೇನೆ. ಆ ದಿನ ಅಮಾನತ್ತುಪಡಿಸಿಕೊಂಡ ವಾಚು ಅದು ಎಸ್.ಸಿ.ನಂ.31/2015 ರಲ್ಲಿ ಹಾಜರುಪಡಿಸಿದ್ದು ಸದರಿ ವಾಚನ್ನು ಆ ಪ್ರಕರಣದಲ್ಲಿ ಈಗಾಗಲೇ ಮುದ್ದೆಮಾಲು-1 ಎಂದು ಗುರುತಿಸಲಾಗಿರುತ್ತದೆ. ಅದನ್ನು ಈ ಪ್ರಕರಣದಲ್ಲಿ ಅಳವಡಿಸಿಕೊಳ್ಳಲಾಯಿತು.

18. ದಿನಾಂಕ 27-04-2014 ರಂದು ಈ ಪ್ರಕರಣದ 2 ಮತ್ತು 3ನೇ ಆರೋಪಿತರು ಈ ಪ್ರಕರಣದಲ್ಲಿ ತೆಗೆದುಕೊಂಡು ಹೋದ ಲಾರಿಯ 4 ಡಿಸ್ಕ್ ಹಾಗೂ ಡೀಸೆಲ್ ಮಾರಿರುವ ವ್ಯಕ್ತಿಯನ್ನು ತೋರಿಸಿಕೊಡುತ್ತೇನೆ ಎಂದು ಹೇಳಿದ ಮೇರೆಗೆ ಮೇಲೆ ಹೇಳಿದ ಪಂಚರಿಗೆ ನೋಟಿಸ್ ಜಾರಿ ಮಾಡಿದ್ದು ಸದರಿಯವರು ಪಂಚರಾಗಲು ಒಪ್ಪಿಕೊಂಡಿದ್ದು 2 ಮತ್ತು 3ನೇ ಆರೋಪಿತರು ನನ್ನನ್ನು, ಸಿಬ್ಬಂದಿಗಳನ್ನು, ಪಂಚರನ್ನು ಚನ್ನಪಟ್ಟಣದ ಮುದಗೆರೆ ಗೇಟ್ ಬಳಿ ಇರುವ ಹನುಮೇಗೌಡರ

ಪಂಚರ್ ಅಂಗಡಿಯ ಹತ್ತಿರ ಕರೆದುಕೊಂಡು ಹೋಗಿ ಎರಡು ಲಾರಿ ಡಿಸ್ಕ್ ಸಮೇತ ಟೈಯರ್ ಹಾಗೂ ಎರಡು ಡಿಸ್ಕ್‌ಗಳನ್ನು ಮಾರಾಟ ಮಾಡಿದ್ದಾಗಿ ಹೇಳಿದ್ದು ಆಗ ಹನುಮೇಗೌಡರನ್ನು ಸದರಿ ವಿಚಾರವಾಗಿ ವಿಚಾರಣೆ ಮಾಡಿದಾಗ ಸದರಿಯವರು ಒಪ್ಪಿಕೊಂಡು 2 ಮತ್ತು 3ನೇ ಆರೋಪಿತರನ್ನು ನೋಡಿ ಗುರುತಿಸಿ ತಮ್ಮ ಅಂಗಡಿಯಿಂದ ಎರಡು ಡಿಸ್ಕ್ ಸಮೇತ ಇರುವ ಟೈಯರ್ ಹಾಗೂ ಎರಡು ಡಿಸ್ಕ್‌ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಮುಂದಿನ ಕ್ರಮಕ್ಕಾಗಿ ಅಮಾನತ್ತುಪಡಿಸಿಕೊಂಡು ಪಂಚನಾಮೆಯನ್ನು 03-15 ರಿಂದ 4-30 ಗಂಟೆವರೆಗೂ ಜರುಗಿಸಿರುತ್ತೇನೆ. ಆ ದಿನ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇದದ ನಿಪಿ-10/ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ಈ ದಿನ ನಿಪಿ-10(ಬಿ) ಎಂದು ಗುರುತಿಸಲಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇದ್ದ ನಿಪಿ-11 ಮತ್ತು 12 ಫೋಟೋಗಳನ್ನು ನೋಡಿ ಅದರಲ್ಲಿರುವ ವಸ್ತುಗಳನ್ನು ಆ ದಿನ ಅಮಾನತ್ತುಪಡಿಸಿಕೊಂಡಿರುವುದಾಗಿ ನುಡಿಯುತ್ತಾರೆ. ಅದೇ ರೀತಿ ಸಾಕ್ಷಿ ನಿಪಿ-12(ಎ) ಸಿ.ಡಿ.ಯನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ-51/2014 ರ ಅಡಿಯಲ್ಲಿ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಪಂಚರಾದ ನರಸಿಂಹಮೂರ್ತಿ ಮತ್ತು ಮಂಜುನಾಥರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

19. ನಂತರ 6ನೇ ಆರೋಪಿ/ರಾಜನು ಪತ್ತೆ ಮಾಡಲು ಸಾಕಷ್ಟು ಪ್ರಯತ್ನ ಮಾಡಿದ್ದು ಆತನು ಸಿಗದೇ ಇದ್ದ ಕಾರಣ ದಿನಾಂಕ 28-04-2014 ರಂದು 5 ಜನ ಆರೋಪಿತರ ವೈದ್ಯಕೀಯ ಪರೀಕ್ಷೆ ಮಾಡಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

20. ದಿನಾಂಕ 30-04-2014 ರಂದು ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಎಫ್.ಎಸ್.ಎಲ್. ಮಡಿವಾಳ, ಬೆಂಗಳೂರುರವರಿಗೆ ಚಾಸಾ-21 ರವರ ಮುಖಾಂತರ

ಕಳುಹಿಸಿಕೊಟ್ಟಿರುತ್ತೇನೆ. ಸದರಿಯವರು ವಸ್ತುಗಳನ್ನು ಕಚೇರಿಗೆ ತಲುಪಿಸಿದ ಬಗ್ಗೆ ಸ್ವೀಕೃತಿಯನ್ನು ತಂದು ಹಾಜರುಪಡಿಸಿ ಹೇಳಿಕೆಯನ್ನು ನೀಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇದ್ದ ಸ್ವೀಕೃತಿಯ ಜೆರಾಕ್ಸ್ ಪ್ರತಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸ್ವೀಕೃತಿಯ ಜೆರಾಕ್ಸ್ ಪ್ರತಿಯಾಗಿದ್ದರಿಂದ ಅದನ್ನು ನಿಶಾನೆಕರಿಸಿರುವುದಿಲ್ಲ.

21. ದಿನಾಂಕ 13-05-2014 ರಂದು ಕೃತ್ಯ ಸ್ಥಳದ ನಕಾಶೆಯನ್ನು ಎ.ಇ.ಇ./ಚಾಸಾ-24 ರವರಿಂದ ಪಡೆದಿರುತ್ತೇನೆ. ಸದರಿಯವರು ಕೃತು ಸ್ಥಳದ ನಕಾಶೆಯನ್ನು ಕವರಿಂಗ್ ಲೆಟರ್‌ನೊಂದಿಗೆ ನೀಡಿರುತ್ತಾರೆ. ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ನಿಪಿ-17, 18 ದಾಖಲೆಗಳನ್ನು ನೋಡಿ ಗುರುತಿಸಿದ್ದು ಈ ದಿನ ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಪ್ರಾಸಾ-10 ರವರ ಸಹಿಯನ್ನು ನಿಪಿ-18(ಬಿ) ಎಂದು ಗುರುತಿಸಲಾಯಿತು.

22. 6ನೇ ಆರೋಪಿಯು ಪತ್ತೆಯಾಗಿರುವುದಿಲ್ಲ, 1 ರಿಂದ 5ನೇ ಆರೋಪಿತರು ನ್ಯಾಯಾಂಗ ಬಂಧನದಲ್ಲಿದ್ದು 90 ದಿನಗಳ ಆಗುತ್ತಾ ಬಂದಿದ್ದು ಆದ ಕಾರಣ ತನಿಖೆ ಸಂದರ್ಭದಲ್ಲಿ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಧಾರಗಳು ಕಂಡು ಬಂದಿದ್ದರಿಂದ 1 ರಿಂದ 6ನೇ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು ದೋಷಾರೋಪಣಾ ಪಟ್ಟಿಯಲ್ಲಿ 6ನೇ ಆರೋಪಿಯು ತಲೆಮರೆಸಿಕೊಂಡಿದ್ದು ಒಂದು ವೇಳೆ ಅತನನ್ನು ದಸ್ತಗಿರಿ ಮಾಡಿದರೆ ಹೆಚ್ಚುವರಿ ದೋಷಾರೋಪಣಾ ಪಟ್ಟಿ ಸಲ್ಲಿಸುವುದಾಗಿ ಷರಾ ಬರೆದು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

23. ದಿನಾಂಕ 14-07-2014 ರಂದು 6ನೇ ಆರೋಪಿ ರಾಜ ಅಲಿಯಾಸ್ ಕರಿರಾಜ ಇತನನ್ನು ನಮ್ಮ ಸಿಬ್ಬಂದಿಯವರು ಬೆಳಿಗ್ಗೆ 11-45 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿದ್ದು ಆರೋಪಿಯನ್ನು

ದಸ್ತಗಿರಿ ಕ್ರಮ ಅನುಸರಿಸಿ ದಸ್ತಗಿರಿ ಮಾಡಿ ಆರೋಪಿಯ ಸ್ವ-ಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ 6ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ ದಿನಾಂಕ 14-07-2014 ರಿಂದ 18-07-2014 ರವರೆಗೂ ಪೋಲಿಸ್ ಕಸ್ಟಡಿಗೆ ತೆಗೆದುಕೊಂಡಿರುತ್ತೇನೆ.

24. ಅದೇ ದಿನ ಟಾಟಾ ಫೈನಾನ್ಸ್‌ರವರಿಗೆ ಕೃತ್ಯಕ್ಕೆ ಉಪಯೋಗಿಸಿದ ಟಾಟಾ ಮ್ಯಾಜಿಕ್ ವಾಹದ ದಾಖಲೆಗಳನ್ನು ಹಾಜರುಪಡಿಸುವಂತೆ ಪತ್ರ ಮುಖೇನ ಕೋರಿಕೊಂಡಿರುತ್ತೇನೆ.

25. ದಿನಾಂಕ 25-07-2014 ರಂದು ಟಾಟಾ ಫೈನಾನ್ಸ್‌ರವರು ವಾಹನಕ್ಕೆ ಸಂಬಂಧಿಸಿದಂತೆ 4 ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ದಿನಾಂಕ 02-09-2014 ರಂದು ಸದರಿ ವಾಹನದ ಡಿ-ಎಕ್ಸ್‌ಟ್ರಾಕ್ಸ್ ಹಾಗೂ ಇತರೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸಬಲ್ಲೆ. ವಾಹನದ ಮೂಲ ಮಾಲೀಕರಾದ ವಿಷಕಂಠರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

26. ಆನಂತರ ದಿನಾಂಕ 04-09-2014 ರಂದು 6ನೇ ಆರೋಪಿಯ ವಿರುದ್ಧ ಹೆಚ್ಚುವರಿ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

27. ಸದರಿಯವರು ನೀಡಿದ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ದಿನಾಂಕ 24-07-2014 ರಂದು ಟಾಟಾ ಫೈನಾನ್ಸ್‌ರವರು ಸರ್ಕಲ್ ಇನ್ಸ್‌ಪೆಕ್ಟರ್ ನೆಲಮಂಗಲದವರಿಗೆ ನೀಡಿದ ದಾಖಲೆಯನ್ನು ನಿಪಿ-51 ಎಂದು, ಬಿ-ಎಕ್ಸ್‌ಟ್ರಾಕ್ಟ್‌ನ್ನು ನಿಪಿ-52 ಎಂದು, ಅಗ್ರಿಮೆಂಟ್ ಪತ್ರವನ್ನು ನಿಪಿ-53 ಎಂದು ಆರೋಪಿತರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

28. ದಿನಾಂಕ 31-10-2014 ರಂದು ಎಫ್.ಎಸ್.ಎಲ್. ಮಡಿವಾಳದಿಂದ ವರದಿಯನ್ನು ಪಡೆದುಕೊಂಡು ದಿನಾಂಕ 16-06-2015 ರಂದು ಎಫ್.ಎಸ್.ಎಲ್. ವರದಿಯನ್ನು ಮಾನ್ಯ

ನ್ಯಾಯಾಲಯಕ್ಕೆ ನಿವೇದಿಸಿಕೊಂಡು, ಸದರಿ ವರದಿ ನೀಡಿದ ವೈದ್ಯರನ್ನು ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ನಿವೇದಿಸಿಕೊಂಡಿರುತ್ತೇನೆ. ಸದರಿ ಎಫ್.ಎಸ್.ಎಲ್. ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇದ್ದ ನಿಪಿ-29/ಎಫ್.ಎಸ್.ಎಲ್. ವರದಿ ಹಾಗೂ ಸ್ಯಾಂಪಲ್ ಸೀಲ್/ನಿಪಿ-30 ನೋಡಿ ಗುರುತಿಸಿದ್ದು, ಈ ದಿನ ಸಾಕ್ಷಿಯ ಸಹಿಯನ್ನು ನಿಪಿ-29(ಬಿ) ಎಂದು ಗುರುತಿಸಲಾಯಿತು.

29. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಈ ದಿನ ನ್ಯಾಯಾಲಯದ ಮುಂದೆ ಇದ್ದ 1, 5, 6ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ದಿನ ವಿ.ಸಿ. ಮೂಲಕ ಬೆಂಗಳೂರು ಜೆ.ಸಿ.ಯಿಂದ ಹಾಜರುಪಡಿಸಿದ 2ನೇ ಆರೋಪಿ ಹಾಗೂ ಕೋಲಾರ ಜೆ.ಸಿ.ಯಿಂದ ಹಾಜರುಪಡಿಸಿದ 4ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಪ್ರಕರಣದ 3ನೇ ಆರೋಪಿಯು ಮೃತಪಟ್ಟಿರುತ್ತಾನೆ. ಆತನ ವಿರುದ್ಧ ಪ್ರಕರಣವು ಅಬೇಟ್ ಆಗಿರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀ-ಸವಾಲು ಮಾಡಲು ಕಾಲವಕಾಶವನ್ನು ಕೇಳುತ್ತಿದ್ದು, ವಕೀಲರ ವಿನಂತಿಯ ಮೇರೆಗೆ ಪಾಟೀ-ಸವಾಲನ್ನು ಮುಂದೂಡಲಾಯಿತು.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

C/c. 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.